# ಒಳಗಿರುವ ಪರಮಾತ್ಮ ಆಡಿಸುವ ಆಟ

ತಮ್ಮ ಮೊದಲ ಸಿನಿಮಾ 'ಗಂಡ ಹೆಂಡತಿ'ಯಲ್ಲಿಯೇ ಪಡ್ಡೆಗಳಿಗೆ ಸಖತ್ ಕಿಕ್ ಕೊಟ್ಟ ನಟಿ ಸಂಜನಾ ಗಲ್ರಾನಿ. ನಂತರದ ದಿನಗಳಲ್ಲಿ 'ಪ್ರದರ್ಶನಕಲೆ'ಯಿಂದ ತೆಲುಗು, ಮಲಯಾಳಂ, ತಮಿಳು ಸಿನಿಮಾಗಳಲ್ಲಿಯೂ ಅವಕಾಶಗಳನ್ನು ದಕ್ಕಿಸಿಕೊಂಡು ಬಹುಭಾಷಾ ತಾರೆಯಾಗಿ ಗುರ್ತಿಸಿಕೊಂಡವರು. ಅವರು ನಟಿಸಿದ ಸಿನಿಮಾಗಳ ಪಟ್ಟಿ ದೊಡ್ಡದಿದೆ. ಆದರೆ ಇಂದೂ ಸಂಜನಾ ಎಂದರೆ ಪಡ್ಡೆಗಳಿಗೆ ನೆನಪಾಗುವುದು ಗಂಡ ಹೆಂಡತಿಯ ಹಸಿಬಿಸಿ ದೃಶ್ಯಗಳೇ.

ಇದೀಗ ಸಂಜನಾ ಮತ್ತೆ ಸುದ್ದಿಯಲ್ಲಿದ್ದಾಳೆ. ಇಷ್ಟು ದಿನ ತೆರೆಯ ಮೇಲೆ ತಮ್ಮ ಭಾವಾಭಿನಯದಿಂದ ಹದಿಹರೆಯದವರಿಗೆ ಕಿಕ್ ಕೊಡುತ್ತಿದ್ದ ಅವರು ಇದೀಗ ತಾವೇ 'ಕಿಕ್' ಏರಿಸಿಕೊಂಡು, ನಿರ್ಮಾಪಕಿ ವಂದನಾ ಜೈನ್ ಅನ್ನುವವರ ಜೊತೆ ಕಿರಿಕ್ ಮಾಡಿಕೊಂಡು ಸುದ್ದಿಯಾಗಿದ್ದಾಳೆ.

ಅಲ್ಲಿ ನಡೆದಿದ್ದು ಏನೋ ಅವರಿಗೇ ಗೊತ್ತು. ಆದರೆ ಉಳಿದವರು ಕಂಡಂತೆ ಹೇಳಬೇಕೆಂದರೆ, ಪಾರ್ಟಿಯೊಂದರಲ್ಲಿ ಇಬ್ಬರೂ ಪಾಲ್ಗೊಂಡಿದ್ದರು. ಆಗ ಒಳಗೆ ಇಳಿದಿದ್ದ ಪರಮಾತ್ಮನ ಅಂತಃಶಕ್ತಿಯಿಂದ ಪ್ರೇರೇಪಣೆಗೊಂಡ ವಂದನಾ ಮತ್ತು ಸಂಜನಾ ಮಧ್ಯ ಮಾತಿನ ಜಟಾಪಟಿ ಆರಂಭವಾಗಿದೆ. ಬರೀ ರೊಮ್ಯಾಂಟಿಕ್ ದೃಶ್ಯಗಳಲ್ಲಿ ನಟಿಸಿ ಬೋರಾಗಿತ್ತೋ ಏನೋ ಸಂಜನಾ ಆ್ಯಕ್ಷನ್ ಸೀನನ್ನೂ ಕ್ರಿಯೇಟ್ ಮಾಡಿದ್ದಾರೆ. ವಂದನಾ ಮುಖದ ಮೇಲೆ 'ತೀರ್ಥ'ಪ್ರೋಕ್ಷಣೆ ಮಾಡಿ ಪಾವನರನ್ನಾಗಿಸಿದ್ದಾರೆ. ಈ ಕುರಿತು ವಂದನಾ ಸಮೀಪದ ಪೊಲೀಸ್ ಠಾಣೆಯಲ್ಲಿ ದೂರನ್ನೂ ಕೊಟ್ಟಿದ್ದಾರೆ.

ರಾತ್ರಿ ಇಳಿದ ಪರಮಾತ್ಮ ಬೆಳಕು ಹರಿಯುವುದರೊಳಗೆ ಹಾರಿ ಹೋಗಿರುತ್ತಾನಲ್ಲಾ... ಈಗ ಸಂಜನಾ 'ನಾನವನಲ್ಲ ನಾನವನಲ್ಲ' ಸ್ಟೈಲ್‌ನಲ್ಲಿ 'ನಾನಂಥವಳಲ್ಲ, ನಾನಂಥವಳಲ್ಲ' ಎಂದು ಮಾಧ್ಯಮಗಳ ಮುಂದೆ ಗೋಳುತೋಡಿಕೊಂಡಿದ್ದರು. ಅಲ್ಲದೆ ವಂದನಾ ನನಗೆ ಜೀವಬೆದರಿಕೆ ಹಾಕಿದ್ದಾರೆ ಎಂದೂ ಹೇಳಿದ್ದಾರೆ.

ಯಾರದು ತಪ್ಪೋ ಯಾರದು ಒಪ್ಪೋ ಬಲ್ಲವರೇ ಬಲ್ಲರು. ಸುಮಾರು ದಿನಗಳಿಂದ ಯಾವುದೇ ವಿವಾದ ಇಲ್ಲದೆ ಭಣಗುಡುತ್ತಿದ್ದ ಗಾಂಧಿನಗರದ ಅರಳಿಕಟ್ಟೆ ಮಾತ್ರ ಈಗ ಈ ಸುದ್ದಿಯ ಸದ್ದಿನಿಂದ ಗಿಜಿಗುಡುತ್ತಿದೆ. ■







# ಜನ್ಯ ಸ್ಫೂರ್ತಿ ಸೆಲೆಗಳು

ಸಾಲು ಸಾಲು ಸಿನಿಮಾಗಳು, ರಿಯಾಲಿಟಿ ಷೋ, ಮ್ಯೂಸಿಕ್ ಷೋಗಳು ಇಷ್ಟೆಲ್ಲ ಕೆಲಸಗಳನ್ನು ಅರ್ಜುನ್ ಜನ್ಯ ಹೇಗೆ ನಿಭಾಯಿಸುತ್ತಾರೆ? ಹೀಗಿದ್ದೂ ಸ್ಟಾರ್ ನಿರ್ದೇಶಕರ ಸಿನಿಮಾಗಳಿಗೆ ಅವರು ಹಾಟ್ ಫೇವರಿಟ್ ಮ್ಯೂಸಿಕ್ ಡೈರೆಕ್ಟರ್ ಆಗಿದ್ದಾರೆ. ಆಗೀಗ ಅವರಿಗೆ ಈ ಪ್ರಶ್ನೆ ಎದುರಾಗುತ್ತಲೇ ಇರುತ್ತದೆ. ಆಗೆಲ್ಲ ಅರ್ಜುನ್ ಜನ್ಯ ಎಂದಿನ ಶೈಲಿಯಲ್ಲಿ ತುಸುನಾಚಿ ನಸು ನಕ್ಕು ಸುಮ್ಮನಾಗುತ್ತಾರೆ. ಆದರೆ ತಮ್ಮ ಚೈತನ್ಯದ ಗುಟ್ಟು ಮಾತ್ರ ಬಿಟ್ಟುಕೊಟ್ಟಿರಲಿಲ್ಲ.

ಆದರೆ 'ಒಡಲೊಳಡಗಿದ ವಿದ್ಯೆ ಒಡಗೂಡಿ ಬರುತಿರಲು' ಎಷ್ಟು ದಿನ ಅಂತ ಮುಚ್ಚಿಟ್ಟುಕೊಳ್ಳಲು ಸಾಧ್ಯ ಹೇಳಿ? ಅರ್ಜುನ್ ಸಾಧನೆಯ ಹಿಂದಿನ ರಹಸ್ಯವನ್ನು ಇತ್ತೀಚೆಗೆ ಒಬ್ಬರು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ! ಹೌದು, ರವಿ ಕೋಡಮಗ್ಗಿ ಎನ್ನುವವರು ಫೇಸ್‌ಬುಕ್‌ನಲ್ಲಿ ಜನ್ಯ ಪ್ರತಿಭಾ ಜಾತಕವನ್ನು ಜಾಲಾಡಿದ್ದಾರೆ. ಈ ಮ್ಯಾಜಿಕಲ್ ಕಂಪೋಸರ್‌ನ ಛೂ ಮಂತರ್ ಕಂಪೋಸಿಂಗ್ ವಿದ್ಯೆಗೆ ಇರುವ ಸ್ಫೂರ್ತಿ ಒಂದೇ ಅಲ್ಲ; ಹಲವು ಎಳೆಗಳಲ್ಲಿ ಅವು ಚಿಮ್ಮಿ ಹೊಮ್ಮುತ್ತಿವೆ ಎನ್ನುವುದನ್ನು ಅವರು ಸಾಕ್ಷಿ ಸಮೇತ ಸಾಬೀತುಗೊಳಿಸಿದ್ದಾರೆ.

'ಹೆಬ್ಬುಲಿ' ಚಿತ್ರದ ಹಾಡುಗಳಿಗೆ ಹಿಂದಿಯ 'ಬದ್ಲಾಪುರ್' ಮತ್ತು ಇಂಗ್ಲಿಷ್ ಆಲ್ಬಂ ಸಾಂಗ್‌ನ ಯಥಾವತ್ ಸ್ಫೂರ್ತಿ, 'ಅಯೋಗ್ಯ' ಚಿತ್ರದ ಹಾಡಿಗೆ ತೆಲುಗಿನ 'ರಂಗಸ್ಥಳಂ' ಸಿನಿಮಾ ಹಾಡಿನ ಹೂಬೇಹೂಬ್ ಸ್ಫೂರ್ತಿ, 'ವಿಲನ್' ಸಿನಿಮಾ ಹಾಡಿಗೆ ಹಿಂದಿಯ ಸಿನಿಮಾ ಒಂದರ ಹಾಡಿನ ಝೆರಾಕ್ಸ್ ಸ್ಫೂರ್ತಿ.. ಹೀಗೆ ಒಂದೊಂದು ಹಾಡಿನ ಹಿಂದೆ ಚಿಮ್ಮಿ ಹೊಮ್ಮಿದ ಸೆಲೆಯ ಮೂಲವನ್ನೂ ರವಿ ಕೋಡಮಗ್ಗಿ ಹುಡುಕಿ ತೆಗೆದು ಅರ್ಜುನ್ ಜನ್ಯಾಗೆ ಗೌರವ ಸಮರ್ಪಣೆ ಮಾಡಿದ್ದಾರೆ.

ಅರ್ಜುನ್ ಅವರಿಗೆ ಈ ರೀತಿಯ ಸನ್ಮಾನಗಳೇನೂ ಹೊಸದಲ್ಲ. ಹಿಂದೆ ಅವರು ಮರಾಠಿಯ 'ನಟರಂಗ್' ಸಿನಿಮಾ ಹಾಡನ್ನು ಕೊಂಚವೂ ಅತ್ತಿತ್ತ ಅಲ್ಲಾಡಿಸದೇ ಎತ್ತಿಕೊಂಡಿದ್ದನ್ನು ಆ ಸಿನಿಮಾ ಸಂಗೀತ ಸಂಯೋಜಕರೇ ಒಂದು ಕಾರ್ಯಕ್ರಮದಲ್ಲಿ ಹೇಳಿಕೊಂಡಿದ್ದರು. ಈಗ ಇನ್ನಷ್ಟು ಮೂಲಸೆಲೆಗಳು ಜಾಹೀರಾಗಿವೆ ಅಷ್ಟೆ. ಇಂಥದ್ದನ್ನು ಹಿಂದೆಯೂ ನಗುಮುಖದಿಂದಲೇ ಸ್ವೀಕರಿಸಿದ್ದ ಅರ್ಜುನ್ ಜನ್ಯಾ ಬತ್ತಳಿಕೆಯಲ್ಲಿ ಇನ್ನಷ್ಟು ಇಂಥ ಟ್ಯೂನ್‌ಗಳು ರೆಡಿ ಇವೆ. ಅದಕ್ಕೆ ನಮ್ಮ ನಿರ್ದೇಶಕರು, ಸ್ಟಾರ್ ನಟರೂ ಮಣೆ ಹಾಕಿ ಹಾಡುಗಳನ್ನು ಹಾಡಿ ಹಾಡಿ ಹೊಗಳುತ್ತಾರೆ. ಜನ್ಯ ವಿಜಯಯಾತ್ರೆ ಮುಂದುವರಿಯುತ್ತದೆ.

ಏನೇ ಹೇಳಿ, ಜಗತ್ತಿನ ಎಲ್ಲಿಯೇ ಒಳ್ಳೆಯದು ಕಂಡರೂ ತೆರೆದ ಮನಸ್ಸಿನಿಂದ ಸ್ವೀಕರಿಸಬೇಕು ಎಂಬ ಮಾತನ್ನು ಅರ್ಜುನ್ ಜನ್ಯ ಇಷ್ಟು ಅಕ್ಷರಶಃ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಯಾರೂ ಎಣಿಸಿರಲಿಕ್ಕಿಲ್ಲ ■